**ಸಿ.ಸಿ. ನಂಬರ: 3081/2024**

**ಸಾಕ್ಷಿ: ಪಿ. ಡಬ್ಲ್ಯೂ: 1**

**(ಇಂದು ತಾ: 29-11-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಮುಂದುವರೆದ ಪಾಟೀ ಸವಾಲು: ಆರೋಪಿ ಪರ ಶ್ರೀ ಆರ್.ಎನ್.ಎನ್. ವಕೀಲರಿಂದ,**

ನಿಪಿ-7 ರಿಂದ 10 ದಾಖಲಾತಿಗಳಿಗೆ ಆರೋಪಿಯು ಆಗಿನ ವ್ಯವಸ್ಥಾಪಕರ ಸಮಕ್ಷಮದಲ್ಲಿ ಸಹಿ ಮಾಡಿರುತ್ತಾರೆ. ನಾನು ಫಿರ್ಯಾದಿ ಸೊಸೈಟಿಯಲ್ಲಿ ವ್ಯವಸ್ಥಾಪಕನಾಗಿ ಮೂರು ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ದೂರಿನಲ್ಲಿ ಹೇಳಿದ ಸಾಲ ನೀಡಿದ ಸಂದರ್ಭದಲ್ಲಿ ಇದ್ದ ವ್ಯವಸ್ಥಾಪಕರ ಹೆಸರು ನಾಗೇಶ ದೇವಾಡಿಗ. ಪ್ರಸ್ತುತ ಸದ್ರಿಯವರು ಪ್ರಧಾನ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಸದ್ರಿಯವರಿಗೆ ಈ ಪ್ರಕರಣದಲ್ಲಿ ಸಾಕ್ಷಿ ಹೇಳಲು ಯಾವುದೇ ತೊಂದರೆ ಇರುವುದಿಲ್ಲ. ಸದ್ರಿಯವರು ಭಟ್ಕಳದಲ್ಲೇ ವಾಸವಿರುತ್ತಾರೆ. ನಿಪಿ-9 ಡಿ.ಪಿ. ನೋಟ್ ನಲ್ಲಿ ಆರೋಪಿಯ ಎರಡು ಸಹಿಗಳನ್ನು ಪಡೆದಿರುತ್ತೇವೆ. ನಿಪಿ-9 ಡಿ.ಪಿ. ನೋಟ್ ನಲ್ಲಿ ಸಾಲಗಾರರು ಸಹಿ ಮಾಡುವ ಜಾಗದಲ್ಲಿ ಅರೋಪಿಯ ಸಹಿಯನ್ನು ಪಡೆದಿರುತ್ತೇವೆ ಎಂದರೆ, ಸಾಕ್ಷಿಯು ಸಾಲಗಾರರು ಮತ್ತು ಜಾಮೀನುದಾರರ ಸಹಿಗಳನ್ನು ಪಡೆಯುತ್ತೇವೆ ಎಂದು ಉತ್ತರಿಸಿರುತ್ತಾರೆ. ನಿಪಿ-9 ರಲ್ಲಿ ಸಾಲಗಾರರು ಸಹಿ ಮಾಡುವ ಜಾಗದಲ್ಲಿ ಜಾಮೀನುದಾರರ ಸಹಿಯನ್ನು ಪಡೆಯಲು ಅವಕಾಶ ಇರುವುದಿಲ್ಲ ಎಂದರೆ ಸರಿಯಲ್ಲ. ಹಾಗಾಗಿಯೇ ಜಾಮೀನುದಾರರ ಸಹಿ ಪಡೆಯುವ ಜಾಗದಲ್ಲಿ ಆರೋಪಿಯ ಸಹಿ ಪಡೆದಿರುತ್ತೇವೆ ಎಂದರೆ, ಸಾಕ್ಷಿಯು ಆರೋಪಿಯೇ ಜಾಮೀನುದಾರರಾಗಿದ್ದಂದ ಸಹಿ ಪಡೆದಿರುತ್ತೇವೆ ಎಂದು ಉತ್ತರಿಸಿರುತ್ತಾರೆ.

2. ಆರೋಪಿಯ ಮಗ ಐನೂಲ್ ಹಕ್ ಎಂಬುವವರ ವಿರುದ್ಧ ಚೆಕ್ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿ. ಅದೇ ರೀತಿ ಆರೋಪಿಯ ಇನ್ನೊಬ್ಬ ಮಗ ಆಸೀಫ್ ಎಂಬುವವರಿಗೆ ಸಾಲ ನೀಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯ ಮಗ ಐನೂಲ್ ಹಕ್ ಫಿರ್ಯಾದಿ ಸೊಸೈಟಿಯಲ್ಲಿ ಯಾವುದೇ ಸಾಲ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಹಾಗಾಗಿಯೇ ಸಾಲಗಾರರು ಸಹಿ ಮಾಡುವ ಜಾಗದಲ್ಲಿ ಜಾಮೀನುದಾರರ ಸಹಿಗಳನ್ನು ಪಡೆದು, ನಮ್ಮ ಅನುಕೂಲಕ್ಕೆ ತಕ್ಕಂತೆ ದಾಖಲಾತಿಗಳನ್ನು ತಯಾರಿಸಿ, ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯ ಮಗ ಐನೂಲ್ ಹಕ್ ರವರ ವಿರುದ್ಧ ಸಿ.ಸಿ. ಸಂಖ್ಯೆ: 75/2025 ರಂತೆ ಸುಳ್ಳು ಚೆಕ್ಕು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ, ಸಾಕ್ಷಿಯು ಚೆಕ್ಕು ಪ್ರಕರಣ ದಾಖಲಿಸಿರುತ್ತೇವೆ, ಆದರೆ ಅದು ಸುಳ್ಳು ಪ್ರಕರಣ ಆಗಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಆರೋಪಿಯ ವಿರುದ್ಧ ಸಿ.ಸಿ. ಸಂಖ್ಯೆ: 83/2025 ರಂತೆ ಸುಳ್ಳು ಚೆಕ್ಕು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ, ಸಾಕ್ಷಿಯು ಹೌದು, ಆರೋಪಿಯ ವೈಯಕ್ತಿಕ ಸಾಲಕ್ಕೆ ಸಂಬಂಧಿಸಿದಂತೆ ಕೇಸು ದಾಖಲಿಸಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ಆರೋಪಿ ಮತ್ತು ಆತನ ಇಬ್ಬರು ಮಕ್ಕಳಿಗೆ ಒಂದೇ ಸಮಯದಲ್ಲಿ ಸಾಲ ನೀಡಿರುತ್ತೇವೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಎರಡೂ ಪ್ರಕರಣಗಳಲ್ಲಿ ನಾನೇ ಸಾಕ್ಷಿ ಹೇಳಿರುತ್ತೇನೆ ಎಂದರೆ ಹೌದು. ಈ ಪ್ರಕರಣ ಮತ್ತು ಮೇಲೆ ಹೇಳಿದ ಎರಡು ಪ್ರಕರಣಗಳಿಗೆ ಸಂಬಂಧಿಸಿದಂತೆ ನಾನು ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ.

3. ಈ ಪ್ರಕರಣದಲ್ಲಿ ಚೆಕ್ಕು ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಅಮಾನ್ಯಗೊಂಡಿರುತ್ತದೆ. ತದನಂತರ ಆರೋಪಿ ಕಳುಹಿಸಿದ ನೋಟೀಸು ಆತನಿಗೆ ತಲುಪಿರುತ್ತದೆ. ಆ ಬಗ್ಗೆ ಅಂಚೆ ಸ್ವೀಕೃತಿ ಇರುತ್ತದೆ. ಸದ್ರಿ ಅಂಚೆ ಸ್ವೀಕೃತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದಾಗ, ಕೂಲಂಕುಷವಾಗಿ ನೋಡಿರುತ್ತೇನೆ. ನಿಪಿ-6 ಅಂಚೆ ಸ್ವೀಕೃತಿಯಲ್ಲಿರುವ ಸಹಿ ಆರೋಪಿಯದೇ ಎಂದು ಖಚಿತಪಡಿಸಿಕೊಂಡಿದ್ದೀರಾ ಎಂದರೆ, ಸಾಕ್ಷಿಯು ಅದನ್ನು ಪೋಸ್ಟಮೇನ್ ರವರು

ಪಡೆದಿರುತ್ತಾರೆ, ಹಾಗೆ ಆರೋಪಿ ಸಹಿ ಮಾಡಿರಬಹುದು ಎಂದು ಉತ್ತರಿಸಿರುತ್ತಾರೆ. ನಿಪಿ-6 ರಲ್ಲಿ ವಿಳಾಸ ಬರೆದಿರುವ ಕೈಬರಹ ಯಾರದು ಎಂದು ನನಗೆ ಗೊತ್ತಿಲ್ಲ. ನಿಪಿ-6 ರಲ್ಲಿ ವಿಳಾಸ ಬರೆದಿರುವ ಪೆನ್ನಿನ ಶಾಹಿ ಮತ್ತು ಸಹಿ ಹಾಕಿದ ಪೆನ್ನಿನ ಶಾಹಿ ಒಂದೇ ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-6 ರಲ್ಲಿ ವಿಳಾಸದಲ್ಲಿ ಅಬ್ಬಾಸ್ ಎಂದು ಬರೆದಿರುವ ಬರಹ ಮತ್ತು ಸಹಿಯಲ್ಲಿರುವ ಅಬ್ಬಾಸ್ ಎಂದು ಬರೆದಿರುವ ಬರಹದ ಕೈ ಬರಹಗಳು ಒಂದೇ ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-6 ರಲ್ಲಿರುವ ಸ್ವೀಕೃತಿದಾರರ ಸಹಿಗೂ ಮತ್ತು ನಿಪಿ-8 ರಿಂದ 10 ರಲ್ಲಿರುವ ಆರೋಪಿಯ ಸಹಿಗಳಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ಆ ರೀತಿ ಸಂಪೂರ್ಣ ವ್ಯತ್ಯಾಸ ಇದ್ದರೂ ಸಹ ವ್ಯತ್ಯಾಸ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಆರೋಪಿಯೇ ಸಹಿ ಮಾಡಿರುತ್ತಾರೆ. ನಿಪಿ-1, 6, 8 ರಿಂದ 10 ದಾಖಲಾತಿಗಳನ್ನು ನಾವು ಸೃಷ್ಠಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

4. ದೂರಿನಲ್ಲಿ ಹೇಳಿರುವ ಸಾಲಕ್ಕೆ ಸಂಬಂಧಿಸಿದಂತೆ ವಿಮೆ ಮಾಡಿರುತ್ತೇವೆ. ಆ ರೀತಿ ಪ್ರತಿವರ್ಷ ಸದ್ರಿ ವಿಮೆಯನ್ನು ನವೀಕರಣಗೊಳಿಸುತ್ತಾ ಇರುತ್ತೇವೆ. ಆ ಬಗ್ಗೆ ಸಾಲದ ಸ್ಟೇಟ್ ಮೆಂಟ್ ನಲ್ಲಿ ಇರುತ್ತದೆ. ಆ ರೀತಿ 2022-23 ಮತ್ತು 2023-24 ನೇ ಸಾಲಿನಲ್ಲಿ ಸಾಲದ ವಿಮೆಯ ಹಣವನ್ನು ಫಿರ್ಯಾದಿ ಸೊಸೈಟಿಯವರು ಪಾವತಿಸಿರುತ್ತಾರೆ. ಆ ರೀತಿ ವಿಮೆಯ ಹಣ ಪಾವತಿಗೆ ಸಂಬಂಧಿಸಿದಂತೆ ದಾಖಲಾತಿ ಹಾಜರುಪಡಿಸಿರುವುದಿಲ್ಲ. ಆ ರೀತಿ ವಿಮೆ ಮಾಡಿರುವುದರಿಂದ ಸಾಲಗಾರರು ಹಣ ಮರುಪಾವತಿಸಲು ವಿಫಲರಾದಾಗ, ಸದ್ರಿ ವಿಮೆಯ ಹಣವನ್ನು ಪಡೆದುಕೊಳ್ಳಲು ಅವಕಾಶ ಇರುತ್ತದೆ ಎಂದರೆ ಸರಿಯಲ್ಲ, ಸಾಲಗಾರರು ಮರಣ ಹೊಂದಿದರೆ ಮಾತ್ರ ವಿಮೆಯ ಹಣ ಬರುತ್ತದೆ. ವಿಮೆಯ ಹಣವನ್ನು ಪಡೆಯಲು ಅವಕಾಶ ಇದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರಿನಲ್ಲಿ ಹೇಳಿದ ಸಾಲದ ನೀಡಿದ ಸಂದರ್ಭದಲ್ಲಿದ್ದ ವ್ಯವಸ್ಥಾಪಕರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿದರೆ, ಸತ್ಯಾಂಶ ಗೊತ್ತಾಗುತ್ತದೆ ಎಂದು ಅವರನ್ನು ಈ ಪ್ರಕರಣದಲ್ಲಿ ಸಾಕ್ಷಿ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2 ಚೆಕ್ಕನ್ನು ಆರೋಪಿಯು ಯಾವತ್ತೂ ದೂರಿನಲ್ಲಿ ಹೇಳಿದ ಸಾಲಕ್ಕೆ ಸಂಬಂಧಿಸಿದಂತೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವೈಯಕ್ತಿಕ ಸಾಲ ಮತ್ತು ಆತನ ಇಬ್ಬರು ಮಕ್ಕಳ ಸಾಲದ ದಾಖಲಾತಿಗಳನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಚೆಕ್ಕು ನೀಡದೇ ಇರುವುದರಿಂದ, ಚೆಕ್ಕು ಪಡೆದ ಬಗ್ಗೆ ಇದೆ ಎಂದು ಹೇಳಿದ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಕರಣಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ನ್ಯಾ.ದಂ., ಭಟ್ಕಳ.**